1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**.36-2022**

ಹೆಸರುಃ ಸರಸ್ವತಿ ಚಾಸಾಃ 9

ಗಂಡಃ ತಿಪ್ಪೇಶಪ್ಪ .ಸಿ.ಆರ್ ಫ್ರಾಸಾ: 8

ವಯಸ್ಸುಃ 40

ಉದ್ಯೋಗಃ ಕೂಲಿ

ವಾಸ ಸ್ಥಳಃ ಗೊಪ್ಪೇನಹಳ್ಳಿ , ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 13-10-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಒಂದು ವರ್ಷದ ಹಿಂದೆ ಚಾಸಾ 1 ಮತ್ತು ಚಾಸಾ 8 ರವರು ಊರಿಗೆ ಹೋಗಿದ್ದರು . ನಮ್ಮ ಮನೆಯ ಎದುರುಗಡೆ ಮನೆ ಚಾಸಾ 1 ರವರ ಮನೆಯ ಬಾಗಿಲು ತೆರೆದಿದ್ದನ್ನು ನೋಡಿ , ಚಾಸಾ 1 ರವರನ್ನು ಕೂಗಿದೆ ಯಾರು ಬರಲಿಲ್ಲ . ಚಾಸಾ 1 ರವರಿಗೆ ದೂರವಾಣಿ ಮುಖಾಂತರ ಕರೆ ಮಾಡಿದೆ . ಚಾಸಾ 1 ರವರಿಗೆ ನಿಮ್ಮ ಮನೆಯ ಬಾಗಿಲು ತೆರೆದಿದೆ ಎಂದು ವಿಷಯ ತಿಳಿಸಿರುತ್ತೇನೆ . ಚಾಸಾ 1 ರವರ ಕೋರಿಕೆಯ ಮೇರೆಗೆ ನಾನು ಅವರ ಮನೆಯ ಒಳಗೆ ಹೋಗಿ ನೋಡಿದಾಗ ಮನೆಯ ಬೀರೂವನ್ನು ಹೊಡೆದಿದ್ದು , ಬಟ್ಟೆ ಎಲ್ಲಾ ಚಲ್ಲಾಪಿಲ್ಲಿಯಾಗಿ ಬಿದ್ದಿತ್ತು . ನಂತರ ಸುಮಾರು 2.30 ಗೆ ಚಾಸಾ 1 ರವರು ಸ್ದಳಕ್ಕೆ ಬಂದರು . ನಂತರ ಪೊಲೀಸ್ ಠಾಣೆಗೆ ಚಾಸಾ 1 ರವರು ದೂರನ್ನು ನೀಡಿರುತ್ತಾರೆ . ಸದರಿ ವಿಚಾರವಾಗಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ . 1 ತಿಂಗಳ ನಂತರ ಆರೋಪಿಯ ಜೊತೆ ಪೊಲೀಸರು ಸ್ದಳಕ್ಕೆ ಬಂದಿರುತ್ತಾರೆ . ನಂತರ ಪೊಲೀಸರು ಆರೋಪಿಯನ್ನು ಕರೆತಂದರು .ಸಾಕ್ಷಿಯು ನ್ಯಾಯಾಲಯದಲ್ಲಿ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

ಪಾಟೀ ಸವಾಲು ಸಆಅ ರವರಿಂದಃ

ದಿಃ 22-09-2021 ರಂದು ನಾನು ಫೋನ್ ಮಾಡಿದ ನಂತರ ಚಾಸಾ 1 ಮತುತ 8 ರವರು ಸಂಜೆ ಬಂದಿರುತ್ತಾರೆ ಎಂದರೆ ಸರಿ . ನಂತರ ನಾನು ಅವರೊಂದಿಗೆ ಮನೆಯ ಒಳಗೆ ಹೋಗಿ ನೋಡಲಾಗಿ ಕಳ್ಳತನವಾಗಿರುವ ವಿಷಯ ತಿಳಿದು ಬಂದಿರುತ್ತದೆ ಎಂದರೆ ಸರಿ . ಬೀರೂವಿನಲ್ಲಿ 5 ಗ್ರಾಂ ತೂಕದ ಕಿವಿಯೋಲೆ , 5 ಗ್ರಾಂ ತೂಕದ ಉಂಗುರ ಕಳ್ಳತನವಾಗಿರುತ್ತದೆ ಎಂದು ಚಾಸಾ 1 ಹಾಗೂ 8 ರವರು ಹೇಳಿರುತ್ತಾರೆ ಎಂದರೆ ಸರಿ .

ದಿಃ 20-10-2021 ರಂದು ಚನ್ನಗಿರಿಯ ಪೊಲೀಸ್ ಠಾಣೆಯ ಚಾಸಾ 12 ರವರು ತಮ್ಮ ಸಿಬ್ಬಂದಿ ಹಾಗೂ ಆರೋಪಿಯ ಜೊತೆ ಬಂದಿರುತ್ತಾರೆ ಎಂದರೆ ಸರಿ . ಸದರಿ ಸಮಯದಲ್ಲಿ ಸಿಕ್ಕ ರೂಃ 5,000/- ನಗದು ಹಣ , 5 ಗ್ರಾಂ ತೂಕದ ಕಿವಿಯೋಲೆ ಹಾಗೂ 5 ಗ್ರಾಂ ತೂಕದ ಉಂಗುರವನ್ನು ಮಹಜರ್ ಜರುಗಿಸಿರುತ್ತಾರೆ ಎಂದರೆ ಸರಿ .

ದಿಃ 22-09-2021 ಹಾಗೂ ದಿಃ 20-10-2021 ರಂದು ನೀಡಿರುವ ಹೇಳಿಕೆ ಮತ್ತು ಮರುಹೇಳಿಕೆಯನ್ನು ಗಾಬರಿಯಿಂದ ನನಗೆ ಹೇಳಲು ಆಗಲಿಲ್ಲ ಎಂದರೆ ಸರಿ .

ಸದರಿ ಹೇಳಿಕೆಯನ್ನು ನಿಪಿ 11 ಎಂದು , ಮರುಹೇಳಿಕೆಯನ್ನು ನಿ ಪಿ 12 ಎಂದು ಗುರುತಿಸಲಾಯಿತು.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ –**

ಚಾಸಾ 8 ಹಾಗೂ ನಾನು ಸ್ನೇಹಿತರು ಎಂದರೆ ಸಾಕ್ಷಿಯು ನಾವಿಬ್ಬರೂ ಎದುರು ಮನೆಯವರು ಎಂದು ನುಡಿಯುತ್ತಾರೆ . ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ . ನಾನು ಆರೋಪಿಯನ್ನು ಇದೇ ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿ . ಸ್ಥಳ ಮಹಜರ್ ಹಾಗೂ ಮಹಜರ್ ಯಾರು ಬರೆದಿರುತ್ತಾರೆ ಎಂಬ ಮಾಹಿತಿ ನನಗೆ ಇಲ್ಲ ಎಂದರೆ ಸರಿ . ಚಾಸಾ 1 ರವರು ಯಾವ ದಿನ , ಯಾವ ತಿಂಗಳು , ಯಾವ ವರ್ಷ ಊರಿಗೆ

ಹೋಗಿದ್ದರು ಎಂದು ಹೇಳಲು ಆಗುವುದಿಲ್ಲ . ಸದರಿ ಹೇಳಿಕೆಯಲ್ಲಿ ಇರುವ ವಿಷಯಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**Sd/-**

**01 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**.36-2022**

ಹೆಸರುಃ ಸುಶೀಲಮ್ಮ ಚಾಸಾಃ 8

ಗಂಡಃ ಜಯಪ್ಪ ಪ್ರಾಸಾ: 7

ವಯಸ್ಸುಃ 48

ಉದ್ಯೋಗಃ ಕೂಲಿ

ವಾಸ ಸ್ಥಳಃ ಗೊಪ್ಪೇನಹಳ್ಳಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 13-10-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಒಂದು ವರ್ಷದ ಹಿಂದೆ ನಮ್ಮ ಮನೆಯಲ್ಲಿ ಕಳ್ಳತನವಾಗಿತ್ತು , ರೂಃ 55,000/- ನಗದು, 5 ಗ್ರಾಂ ಓಲೆ ಹಾಗೂ 5 ಗ್ರಾಂ ಉಂಗುರ . ನಾವು ಬೆಂಗಳೂರಿಗೆ ಹೋಗಿದ್ದಾಗ ನಮ್ಮ ಪಕ್ಕದ ಮನೆಯವರು ನಮ್ಮ ಮನೆ ಕಳ್ಳತನವಾಗಿತ್ತು ಎಂದು ವಿಷಯವನ್ನು ತಿಳಿಸಿರುತ್ತಾರೆ . ನಂತರ ನಾವು 4.00 ಗಂಟೆಯ ಹೊತ್ತಿಗೆ ಮನೆಗೆ ವಾಪಾಸಾದಾಗ ಮನೆಯಲ್ಲಿ ಎಲ್ಲಾ ಸಾಮಾನುಗಳು ಚಲ್ಲಾಪಿಲ್ಲಿಯಾಗಿ ಬಿದ್ದಿದ್ದು ನಂತರ ಪೊಲೀಸರು ಬಂದು ಮುಂದಿನಕ್ರಮಕ್ಕಾಗಿ ಠಾಣೆಗೆ ಕರೆದಿರುತ್ತಾರೆ .

ನಂತರ ಚಾಸಾ 1 ರವರು ದೂರನ್ನು ದಾಖಲಿಸಿರುತ್ತಾರೆ . ನಾನು ಈ ವಿಚಾರವಾಗಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ . ನಂತರ ಪೊಲೀಸರು ಆರೋಪಿಯನ್ನು ಕರೆತಂದರು .ಸಾಕ್ಷಿಯು ನ್ಯಾಯಾಲಯದಲ್ಲಿ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ . ನಂತರ ಸದರಿ ವಿಚಾರವಾಗಿ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ .

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

ದಿಃ 17-09-2021 ರಂದು ಚಾಸಾ 1 ರವರ ಜೊತೆ ನಾವು ಮನೆಯ ಬೀಗ ಹಾಕಿಕೊಂಡು ಬೆಂಗಳೂರಿಗೆ ಹೋಗಿರುತ್ತೇವೆ ಎಂದರೆ ಸರಿ . ಕಳ್ಳತನವಾದ ಮಾಲುಪಟ್ಟಿ ಸಂಖ್ಯೆಃ 2 ರಿಂದ 3 ರಲ್ಲಿ ಇರುವ ಮಾಲುಗಳು ಗಾಡ್ರೇಜ್ ಬೀರೂವಿನಲ್ಲಿ ಇದ್ದವು ಎಂದರೆ ಸರಿ . ದಿಃ 22-09-2021 ರಂದು ಚಾಸಾ 9 ರವರು ಬೆಳಗ್ಗೆ 7.00 ಗಂಟೆಗೆ ನಮ್ಮ ಮನೆಯ ಬಾಗಿಲು ತೆರೆದಿದೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಅದೇ ದಿನ ಸಂಜೆ 4.00 ಗಂಟೆಯ ಸಮಯಕ್ಕೆ ನಾನು ಹಾಗೂ ಚಾಸಾ 1, 9 ರವರು ಮನೆಯ ಒಳಗೆ ಹೋಗಿ ಬೀರೂವನ್ನು ನೋಡಲಾಗಿ ಬೀಗ ಹೊಡೆದಿರುವುದಾಗಿ ಕಂಡು ಬಂದಿರುತ್ತದೆ ಎಂದರೆ ಸರಿ . ನಂತರ ಚಾಸಾ 1 ರವರು ದೂರನ್ನು ನೀಡಿರುತ್ತಾರೆ ಎಂದರೆ ಸರಿ .

ನಂತರ ಪೊಲೀಸಿನವರು ನಮ್ಮ ಮನೆಗೆ ಬಂದು ಸ್ಥಳ ಮಹಜರ್ ನಿ ಪಿ 10 ರಂತೆ ನಡೆಸಿ ನಂತರ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಸರಿ . ಎಲ್ಲಾ ವಿಚಾರಗೊತ್ತಿದ್ದರೂ , ಹೇಳಿಕೆಯನ್ನು ನೀಡಿದ್ದರೂ ನನಗೆ ಗಾಬರಿಯಿಂದ ನ್ಯಾಯಾಲಯದಲ್ಲಿ ಹೇಳಲು ಆಗಲಿಲ್ಲ ಎಂದರೆ ಸರಿ . ಸದರಿ ಹೇಳಿಕೆಯನ್ನು ನಿ ಪಿ 10 ಎಂದು ಗುರುತಿಸಲಾಯಿತು .

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ –**

ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ . ಚಾಸಾ 9 ಹಾಗೂ ನಾನು ಸ್ನೇಹಿತರು ಎಂದರೆ ಸರಿ . ಮಹಜರ್ ಕಾಲಕ್ಕೆ ನೀಡಿದ ಹೇಳಿಕೆ ಹಾಗೂ ಮರುಹೇಳಿಕೆಯಲ್ಲಿ ಇರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ .

**ಮರು ವಿಚಾರಣೆ ಇಲ್ಲ. ( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**Sd/-**

**01 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**36/2022**

ಹೆಸರುಃ ಮೂರ್ತಿ .ಎಸ್ಆರ್ ಚಾಸಾಃ 4

ತಂದೆಃ ರಾಜಪ್ಪ ಪ್ರಾಸಾ: 5

ವಯಸ್ಸುಃ 48

ಉದ್ಯೋಗಃ ಹೋಟೆಲ್ ವ್ಯಾಪಾರ

ವಾಸ ಸ್ಥಳಃ ಗೊಪ್ಪೇನಹಳ್ಳಿ ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 12-10-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ಸಾಕ್ಷಿಗೆ ಸ್ದಳ ಮಹಜರ್ ನ್ನು ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸ್ದಳ ಮಹಜರ್ ನ್ನು ಈಗಾಗಲೇ ನಿಶಾನೆ ಪಿ 3 ಎಂದು ಗುರುತಿಸಲಾಗಿದೆ , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 3 ಸಿ ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕಃ 20-10-2021 ರಂದು ಚನ್ನಗಿರಿ ಬೀರೂರು ರಸ್ತೆಯ ಸೇತುವೆ ಪಕ್ಕದಲ್ಲಿ ಸಹಿಯನ್ನು ಮಾಡಿರುತ್ತೇನೆ . ಕಳ್ಳತನದ ವಿಚಾರವಾಗಿ ಆರೋಪಿಯನ್ನು ಹಿಡಿದಿರುವಾಗ ಪಂಚನಾಮೆಯ ಕಾಲಕ್ಕೆ ಸಹಿಯನ್ನು ಮಾಡಿರುತ್ತೇನೆ . ನನ್ನ ಜೊತೆ ಮಹಜರ್ ಗೆ ಚಾಸಾ 5 ರವರು ಸಹಿ ಮಾಡಿರುತ್ತಾರೆ . ಸದರಿ ಸಮಯದಲ್ಲಿ ಎಂ.ಓ 1 ರಿಂದ 4 ರವರೆಗೆ ಇರುವ ಮಾಲುಗಳನ್ನು ಮತ್ತು ಬೈಕನ್ನು ಸದರಿ ಆರೋಪಿಯಿಂದ ಪೊಲೀಸರು ವಶಪಡಿಸಿಕೊಂಡಿರುತ್ತಾರೆ . ರೂಃ 5000/- ( 500 ರೂ ಮುಖಬೆಲೆಯ 10 ನೋಟುಗಳು ಹಾಗೂ ರೂಃ 2000/-( 500 ರೂ ಮುಖಬೆಲೆಯ 4 ನೋಟುಗಳು) ಇದ್ದವು . ಎರಡು ಕಿವಿಯ ಓಲೆಗಳು ಮತ್ತು ಒಂದು ಚಿನ್ನದ ಉಂಗುರವನ್ನು ವಶಪಡಿಸಿಕೊಂಡಿರುತ್ತಾರೆ . ಸದರಿ ಮಹಜರ್ ನ್ನು ಬೆಳಗ್ಗೆ 8.00 ರಿಂದ 9.00 ಗಂಟೆಯವರೆಗೆ ಜರುಗಿಸಿರುತ್ತಾರೆ . ಕಬ್ಬಳ ಗ್ರಾಮದಿಂದ ಬೈಕ್ ನ್ನು ಕಳ್ಳತನ ಮಾಡಿ ತಂದಿರುತ್ತೇನೆ .

ಗೊಪ್ಪೇನಹಳ್ಳಿಯ ಮನೆ ಹಾಗೂ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಕೆಲವು ತಂತಿಯನ್ನು ಕಳ್ಳತನ ಮಾಡಿರುತ್ತೇನೆ ಎಂದು ಆರೋಪಿಯು ತಿಳಿಸಿರುತ್ತಾನೆ . ಬೈಕ್ ನ ಸಂಖ್ಯೆಃ ಕಎ 17 ಇಪಿ 4087 ಆಗಿತ್ತು .

ಈಗಾಗಲೇ ನಿ ಪಿ 3 ರಿಂದ 7 ವರೆಗೆ ಇರುವ ಪೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ .

ಸಾಕ್ಷಿಯು ನ್ಯಾಯಾಲಯದಲ್ಲಿ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

ಈಗ ಸಾಕ್ಷಿಗೆ ಆರೋಪಿ ತೋರಿಸಿದ ಸ್ಥಳ ಮಹಜರ್ ನ್ನು ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸ್ಥಳ ಮಹಜರ್ ನ್ನು ಈಗಾಗಲೇ ನಿಶಾನೆ ಪಿ 8 ಎಂದು ಗುರುತಿಸಲಾಗಿದೆ , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 8 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಚಾಸಾ 1 ರವರ ಮನೆಯ ಮುಂದೆ ಮಾಡಿರುತ್ತೇನೆ , ನನ್ನ ಜೊತೆ ಚಾಸಾ 5 ರವರು ಸಹಿ ಮಾಡಿರುತ್ತಾರೆ . ಸದರಿ ಮಹಜರ್ ನ್ನು ಬೆಳಗ್ಗೆ 9.30 ರಿಂದ 10.00 ಗಂಟೆಯವರೆಗೆ ಜರುಗಿಸಿರುತ್ತಾರೆ .

ಸಾಕ್ಷಿಯು ನ್ಯಾಯಾಲಯದಲ್ಲಿ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

ಈಗಾಗಲೇ ನಿ ಪಿ9 ರಲ್ಲಿ ಇರುವ ಪೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ –**

ಪೊಲೀಸರು ಪಂಚನಾಮೆ ಮಾಡುವ ಕಾಲಕ್ಕೆ ನನಗೆ ದಿಃ 20-10-2021 ರಂದು ನೋಟೀಸನ್ನು ಕೊಟ್ಟಿದ್ದರು . ಚಾಸಾ 5 ಮತ್ತು ನಾನು ಒಂದೇ ಊರಿನವರು ಹಾಗೂ ಇಬ್ಬರು ವ್ಯಾಪಾರಸ್ಥರು ಎಂದರೆ ಸರಿ . ಪಂಚನಾಮೆಯ ಸಮಯದಲ್ಲಿ ಸ್ಥಳದಲ್ಲಿ 8 ರಿಂದ 10 ಜನ ನೆರದಿದ್ದರು . ಸದರಿ ಪಂಚನಾಮೆಗೆ ನನ್ನ ಜೊತೆ ಮತ್ತಿಬ್ಬರು ಸಹಿಯನ್ನು ಹಾಕಿರುತ್ತಾರೆ . ಆರೋಪಿಯು ಯಾವ ದಿನ , ಯಾವ ಸ್ಥಳದಲ್ಲಿ ಕಳ್ಳತನ ಮಾಡಿದ್ದಾನೆ ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ . ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಎಷ್ಟು ಉದ್ದದ ತಾಮ್ರದ ತಂತಿಯನ್ನು ಅಳವಡಿಸಿದ್ದರು ಎಂದರೆ ಸಾಕ್ಷಿಯು ಆರೋಪಿಯು 20 ಮೀಟರ್ ತಾಮ್ರದ ತಂತಿಯನ್ನು ರೂಃ 6000/- ಕ್ಕೆ ಮಾರಿರುತ್ತೇನೆ ಎಂದು ನುಡಿಯುತ್ತಾನೆ . ಆರೋಪಿಯು ತಾಮ್ರದ ತಂತಿಯನ್ನು ಯಾರಿಗೆ ಮಾರಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ . ಸದರಿ ಆರೋಪಿಯು ಬೀಗ ಹೊಡೆದು ಮನೆಯ ಕಳ್ಳತನ ಮಾಡಿರುವ ಸಮಯದಲ್ಲಿ ಬೀಗವನ್ನು ಪೊಲೀಸರು ವಶಪಡಿಸಿಕೊಂಡಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ . ಮನೆಗೆ ಯಾವ ರೀತಿಯ ಬೀಗ ಹಾಕಿದ್ದರು ಎಂಬ ವಿಷಯ ನನಗೆ ಗೊತ್ತಿಲ್ಲ . ನಿ ಪಿ 9 ರಲ್ಲಿರುವ ಮನೆಗೆ ಯಾವುದೇ ನಾಮಫಲಕ ಇರುವುದಿಲ್ಲ ಎಂದರೆ ಸಾಕ್ಷಿಯು ಅದು ಚಾಸಾ 1 ರವರ ಮನೆ ಎಂದು ನುಡಿಯುತ್ತಾರೆ . ಆರೋಪಿಯ ಬಳಿಯಿಂದ ವಶಪಡಿಸಿಕೊಂಡಿರುವ ಎಂ.ಓ 3 ಮತ್ತು 4 ರಲ್ಲಿರುವ ಬಂಗಾರದ ಒಡವೆಗಳು ಎಷ್ಟು ಗ್ರಾಂಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ .

ಸದರಿ ಪಂಚನಾಮೆಯನ್ನು ಯಾರು ಟೈಪ್ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ . ಚಾಸಾ 1 ಹಾಗೂ ನಾನು ಸಂಬಂಧಿಕರು ಎಂದರೆ ಸಾಕ್ಷಿಯು ನಾವು ಒಂದೇ ಊರಿನವರು ಎಂದು ನುಡಿಯುತ್ತಾರೆ . ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸದಿದ್ದರೂ ಕೂಡ ಚಾಸಾ 1 ರವರ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**Sd/-**

**01 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**